ಹೀಗೆ ಕಪ್ಪು ಹಲಗೆಯ ಮೇಲೆ ಮೇಷ್ಟ್ರು ಬರೆದರು. ಅದನ್ನು ಓದಿದ ವಿದ್ಯಾರ್ಥಿಗಳು ಆಶ್ಚರ್ಯಪಟ್ಟರು. "ಇದು... ಇದು ಸಾಧ್ಯವೇ?" ಎಂದು ತಲೆ ಕೆರೆದುಕೊಂಡರು. ಸ್ವಲ್ಪ ಸಮಯದ ನಂತರ ಮೇಷ್ಟ್ರು ಹೀಗೆ ಪದ ವಿಂಗಡನೆ ಮಾಡಿದರು:

"ಪರ್ವತದೋಳ್ ಶಿಲೆ,
ಪಾಲ್ಗರೆಯೆ ಪಶುವು,
ಮಗುವನೆತ್ತಿ ಮುದ್ದಾಡೆ ನಾರಿ,
ವೇದವನೋದಲ್ ಬ್ರಾಹ್ಮಣ,
ಕಾಗೆ ಮಾಂಸವ ತಿನ್ನಲ್,
ಅದೇನಾಶ್ಚರ್ಯಂ ?"

ಹೌದಲ್ಲವೇ? ಅದೇನಾಶ್ಚರ್ಯ? ಸ್ವಲ್ಪ ಏರುಪೇರಾದರೆ ಮಾತ್ರ ಆಶ್ಚರ್ಯ, ಪರಮಾಶ್ಚರ್ಯ! ಪದ ವಿಂಗಡನೆ ಮಾಡಿದ ತರುವಾಯ ನಗುವುಕ್ಕಿ ಹರಿಯಿತು. ಎಲ್ಲರ ಹುಬ್ಬುಗಳೂ ಸಡಿಲ ವಾದುವು. "ಓಹೋ, ಎಂಥ ಸೊಗಸಾದ ಉದಾಹರಣೆ ಅಲ್ಲವೇ?" ಎಂದು ಎಲ್ಲರೂ ಅಂದುಕೊಂಡರು. ಬೋಧಕ ತನ್ನ ಕ್ರಿಯಾಶೀಲತೆಯನ್ನು ಇಂಥ ಸಂದರ್ಭಗಳಲ್ಲಿಯೇ ತೋರ್ಪಡಿಸಿ ಕೊಳ್ಳಬೇಕು. ಆ ಮೂಲಕ ತನ್ನ ತರಗತಿಯನ್ನು ಸಮರ್ಥವಾಗಿ ಹಿಡಿದಿಡಬೇಕು.

ಉದಾಹರಣೆಗಳನ್ನು ಅಳವಡಿಸಿಕೊಳ್ಳುವಾಗ ಸ್ವಲ್ಪ ಹೆಚ್ಚು ಕಡಮೆಯಾದರೂ ಹೇಗೆ ಆಭಾಸವಾಗಿ ಬಿಡುತ್ತದೆ ಎಂಬುದಕ್ಕೆ ಒಂದು ಉದಾಹರಣೆ ಇಲ್ಲಿದೆ:

ಒಬ್ಬ ಅಧ್ಯಾಪಕರು ತಮ್ಮ ತರಬೇತಿಯ ಸಮಯದಲ್ಲಿ ಒಂದು ವಿಷಯ ತಿಳಿದುಕೊಂಡಿರುತ್ತಾರೆ. ಅದೇನೆಂದರೆ, 'ತಿಳಿದಿರುವ ವಿಷಯದಿಂದ ತಿಳಿಯದಿರುವ ವಿಷಯದತ್ತ ವಿದ್ಯಾರ್ಥಿಗಳನ್ನು ಕರೆದೊಯ್ಯುವುದು' ಎಂದು. ಅದು ಅವರ ತಲೆಯಲ್ಲಿ ಭದ್ರವಾಗಿ ಕುಳಿತುಬಿಟ್ಟಿರುತ್ತದೆ. ಒಮ್ಮೆ ಶಾಲೆಯಲ್ಲಿ ಪಾಠ ಪ್ರಾರಂಭಿಸುವುದಕ್ಕೆ ಮುಂಚೆ ವಿದ್ಯಾರ್ಥಿಯೊಬ್ಬನನ್ನು ಹೀಗೆ ಪ್ರಶ್ನಿಸುತ್ತಾರೆ:

"ನಿಮ್ಮ ತಂದೆಯ ಕಸುಬೇನು ?"

"ನಮ್ಮ ತಂದೆ ರೈತರು ಸಾರ್."

"ಒಳ್ಳೆಯದು, ನಿಮ್ಮದು ಗದ್ದೇನಾ, ತೋಟಾನಾ, ಹೊಲಾನಾ?"

"ತೋಟ, ಸಾರ್."

"ಬಹಳ ಒಳ್ಳೆಯದು. ನೀರಿಗೇನು ವ್ಯವಸ್ಥೆ ಇದೆ?"

"ಬಾವಿ ಇದೆ ಸಾರ್."

"ತುಂಬಾ ಒಳ್ಳೆಯದು. ನೀರನ್ನು ಮೇಲಕ್ಕೆ ಹೇಗೆ ತೆಗೀತೀರಿ?"

" 'ಪಂಪ್' ಹಾಕಿದೀವಿ ಸಾರ್."

ವೆರಿಗುಡ್, ನಾವು ಇವತ್ತು ಪಂಪನ ಬಗ್ಗೆ ತಿಳಿದುಕೊಳ್ಳೋಣ!" ಎಲ್ಲಿಯ ತೋಟದ ಪಂಪು, ಪಂಪಕವಿಗೆ ಅದಕ್ಕೆಂಥ ಸಂಬಂಧ?! ಇಂಥ ಬೋಧನೆ ಎಂದಿಗೂ ಕೂಡದು. ಅದಕ್ಕಾಗಿಯೇ ಹೇಳುವುದು, ಬೋಧಿಸುವುದಕ್ಕೆ ಪೂರ್ವಸಿದ್ಧತೆ ಅತ್ಯಗತ್ಯ ಎಂದು. ಇಲ್ಲದಿದ್ದಾಗ ಮಾತ್ರ, 'ಪಂಪ' ಮಹಾಕವಿಯ ಮಹತ್ವವನ್ನು 'ಪಂಪು' ಅಳಿಸಿಹಾಕಿಬಿಡುತ್ತದೆ !

ಬೋಧನೆಗೆ ಪೂರಕವಾಗುವಂತೆ ಮತ್ತೂ ಕೆಲವು ಆಕರ್ಷಕ ಅಂಶಗಳಿವೆ. ಆ ಪೈಕಿ 'Acronym' ಸಹ ಒಂದು. ಅಂದರೆ ಪದಗಳ ಮೊದಲನೇ ಅಕ್ಷರದಿಂದ ಪದ ಮಾಡುವುದು. ಉದಾಹರಣೆಗೆ 'VIBGYOR' ಅನ್ನುತ್ತೇವೆ. ಅಂದರೆ ಇದು ಬಿಳಿಯಲ್ಲಿರುವ ಏಳು ಬಣ್ಣಗಳನ್ನು ಕುರಿತಾದುದು.

V ಅಂದರೆ Violet; I ಅಂದರೆ Indigo

B ಅಂದರೆ Blue; G ಅಂದರೆ Green

Y ಅಂದರೆ Yellow; O ಅಂದರೆ Orange

R ಅಂದರೆ Red

ನೋಡಿ, ಮೊದಲನೆಯ ಅಕ್ಷರದಿಂದ ಪದಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು ಎಷ್ಟು ಸುಲಭ ಅಂತ. 'VIBGYOR – ಏಳು ಬಣ್ಣ ಸೇರಿ ಬಿಳಿಯ ಬಣ್ಣವಾಯಿತು!' ಇದೇ ರೀತಿ ಒಂಬತ್ತು ಗ್ರಹಗಳನ್ನು ಸರದಿಯ ಪ್ರಕಾರ ನೆನಪಿನಲ್ಲಿಟ್ಟುಕೊಳ್ಳಲು ಒಂದು ವಾಕ್ಯವನ್ನು ಬಳಸುತ್ತೇವೆ. 'My Very Educated Mother Just Showed Us Nine Planets.'

ಇದನ್ನು ಹೀಗೆ ನೆನಪಿನಲ್ಲಿ ಇಟ್ಟುಕೊಳ್ಳಬಹುದು.

M for Mercury; V for Venus

E for Earth; M for Mars

J for Jupitor; S for Saturn

U for Uranus; N for Neptune

P for Pluto

ಹೀಗಾದಾಗ ನೆನಪಿಟ್ಟುಕೊಳ್ಳಲು ಸುಲಭ ಮತ್ತು ಸರದಿ ಸಹ ಮರೆತು ಹೋಗುವುದಿಲ್ಲ.

### ಸಕಾರಾತ್ಮಕ ಮನೋಭಾವನೆ

ಯಾವುದೇ ಬೋಧಕನಿಗೆ 'ಸಕಾರಾತ್ಮಕ ಮನೋಭಾವನೆ' ಅಂದರೆ 'Positive attitude' ಇರಲೇಬೇಕು. ಅದರ ಜೊತೆಗೆ ಹುಮ್ಮಸ್ಸಿನಿಂದ, ನಗುಮುಖದಿಂದ, ಬೋಧಕನ ವೃತ್ತಿಯನ್ನು ಆಸ್ವಾದಿಸಬೇಕು, ಆರಾಧಿಸಬೇಕು. ಅಲ್ಲಿ ಗಂಟುಮುಖಕ್ಕೆಂದೂ ಆಸ್ಪದವಿಲ್ಲ. ಅದನ್ನು ತಮಾಷೆಯಾಗಿ ಆಂಗ್ಲಭಾಷೆಯಲ್ಲಿ ಹೀಗೆ ಹೇಳುತ್ತಾರೆ: "If you want to be happy for ever - Enjoy what you do." ನೀವು ಯಾವಾಗಲೂ ಸಂತೋಷ ವಾಗಿರಬೇಕೆಂದು ಬಯಸುವುದಾದರೆ, ಏನನ್ನು ಮಾಡುತ್ತೀರೋ ಅದೆಲ್ಲವನ್ನೂ ಸಂತೋಷದಿಂದ ಮಾಡಿ. ಇದು ಬರೀ ಬೋಧನೆಗಷ್ಟೇ ಸೀಮಿತವಾಗುವುದಿಲ್ಲ. ಇಡೀ ಜೀವನಕ್ಕೇ ಅಳವಡಿಸಿಕೊಳ್ಳಬಹುದಾದ, ಅಳವಡಿಸಿಕೊಳ್ಳಬೇಕಾದ ಸಿದ್ಧಸೂತ್ರ.

ಶಿಕ್ಷಕನು ಸಂತೋಷದ ಸ್ವಭಾವದವನಾಗಿರಬೇಕು. ಶಿಕ್ಷಕನು ಉಲ್ಲಾಸದಿಂದ ಪಾಠಮಾಡಿದಾಗಲೇ, ಮಕ್ಕಳೂ ಆನಂದದಿಂದ ಕಲಿಯುತ್ತಾರೆ. ಆಗ 'ಬೋಧನೆ' ಮತ್ತು 'ಕಲಿಕೆ' ಎರಡೂ ಅನುಕೂಲ ಕರವಾದ ವಾತಾವರಣದಲ್ಲಿ ನಡೆಯುತ್ತವೆ. ಇದನ್ನು ಸಾಧಿಸಲು ಶಿಕ್ಷಕನು ಸಂತುಲಿತ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಸಂತೋಷದಿಂದ ಕೆಲಸ ಮಾಡುವ ಶಿಕ್ಷಕನು ತನ್ನ ತರಗತಿಯಲ್ಲಿ

ಆನಂದದ ವಾತಾವರಣವನ್ನು ಸೃಷ್ಟಿಸಿಕೊಳ್ಳುತ್ತಾನೆ. ಇದರಿಂದ ಕಲಿಕೆಯು ಮಕ್ಕಳಿಗೆ ಭಾರವಾಗದೆ, ಹಗುರವಾಗುತ್ತದೆ; ಮನಸ್ಸಿಗೆ ತುಂಬ ಮುದಗೊಡುತ್ತದೆ.

### ಪರಿಣತಿ–ಹಾವಭಾವ

ಇದಲ್ಲದೆ ಒಬ್ಬ ಶಿಕ್ಷಕನಿಗೆ ತಾನು ಬೋಧಿಸುವ ವಿಷಯದಲ್ಲಿ ಗಾಢವಾದ ಅಧ್ಯಯನ ಮತ್ತು ಪರಿಣತಿಗಳು ಅತ್ಯವಶ್ಯಕ. ತನ್ನ ಮಿದುಳಿನ ಮೂಲಕ ಅವನು ಅದರ ಪರಿಕಲ್ಪನೆಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕು; ತನ್ನ ಹೃದಯದ ಮೂಲಕ ಆ ವಿಷಯದ ಸ್ವಾರಸ್ಯವನ್ನು ಭಾವಿಸಿಕೊಳ್ಳಬೇಕು ಹಾಗೂ ಕೈಗಳ ಮೂಲಕ ಆ ವಿಷಯದ ಪ್ರತ್ಯಕ್ಷ ಅನುಭವವನ್ನು ಕಾರ್ಯಗತ ಮಾಡಿ ತಿಳಿದು ಕೊಂಡಿರಬೇಕು.

ಉಚಿತ ಹಾವಭಾವಗಳು ಕೂಡ ಬೋಧನೆಯನ್ನು ಪರಿಣಾಮಕಾರಿಯನ್ನಾಗಿ ಮಾಡುತ್ತವೆ. ಅಂತಹ ಐದು ವಿಧಾನಗಳಿವೆ: ೧. ಕೈಗಳನ್ನು ಆಡಿಸುವುದು; ೨. ಕಣ್ಣುಗಳ ಸಂಚಲನೆ; ೩. ಮುಖದ ಮೂಲಕ ವಿವಿಧ ಭಾವಗಳ ಪ್ರಕಟಣೆ ೪. ಭಾಷೆಯಲ್ಲಿನ ಚತುರತೆ ೫. ಶಬ್ದದಲ್ಲಿನ ಏರಿಳಿತಗಳು ಮತ್ತು ವಿವಿಧ ಬಗೆಯ ವಿಶಿಷ್ಟ ಧ್ವನಿಗಳು. ಇವುಗಳನ್ನು ಸರಿಯಾಗಿ ಅಭ್ಯಾಸ ಮಾಡಿ, ಬೋಧನೆಯಲ್ಲಿ ಉಪಯೋಗಿಸಿಕೊಂಡರೆ, ಅದು ವಿದ್ಯಾರ್ಥಿಗಳಲ್ಲಿ ತೀವ್ರವಾದ ಆಸಕ್ತಿಯನ್ನು ಕೆರಳಿಸಿ, ಅವರ ಕಲಿಕೆಯನ್ನು ಕುತೂಹಲಕಾರಿಯನ್ನಾಗಿಯೂ, ಸಂತೋಷ ದಾಯಕವನ್ನಾಗಿಯೂ ಮಾಡುತ್ತದೆ.

ಬೋಧನೆಯು ಪರಿಣಾಮಕಾರಿಯಾಗಿರಬೇಕಾದರೆ, ಕೆಳಗಿನ ಪ್ರಾಯೋಗಿಕ ಅಂಶಗಳನ್ನು ಶಿಕ್ಷಕರು ಅಳವಡಿಸಿಕೊಳ್ಳಬೇಕು:

೧. ಕಲಿಕೆಯ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಯು ಕೈಗೊಳ್ಳಬೇಕಾದ ಸಂಗತಿಗಳ ಬಗ್ಗೆ ಅವರಿಗೆ ಚೆನ್ನಾಗಿ ಮನವರಿಕೆ ಮಾಡಿ ಕೊಡುವುದು.

೨. ವಿದ್ಯಾರ್ಥಿಗಳು ಮಾಡಲು ಸಾಧ್ಯವಿರುವ ಕಾರ್ಯವನ್ನು ಮಾತ್ರವೇ ಅವರಿಗೆ ವಹಿಸುವುದು.

೩. ಕ್ರಮಬದ್ಧವಾಗಿ ಮೆಟ್ಟಿಲು–ಮೆಟ್ಟಿಲಾಗಿ ಏರಿಹೋಗುವ ರೀತಿ ಯಲ್ಲಿ ವಿದ್ಯಾರ್ಥಿಗಳಿಗೆ ಹೇಳಿಕೊಡುವುದು.

೪. ಒಂದು ತರಗತಿಗೆ ಸೇರಿದ ಮಕ್ಕಳನ್ನು ವಿವಿಧ ಬಗೆಯ ಚಟುವಟಿಕೆಗಳಲ್ಲಿ ತೊಡಗಿಸುವುದು.

೫. ಕೆಲವೊಮ್ಮೆ ವಿದ್ಯಾರ್ಥಿಗಳನ್ನು, ತಮಗಿಷ್ಟ ಬಂದ ಚಟುವಟಿಕೆ ಗಳನ್ನು ಆಯ್ಕೆಮಾಡಿಕೊಳ್ಳುವಂತೆ ಪ್ರೋತ್ಸಾಹಿಸುವುದು.

೬. ತರಗತಿಯು ಎಲ್ಲ ಸಮಯವೂ ಚಟುವಟಿಕೆಗಳಿಂದ ಕೂಡಿರು ವಂತೆ ನೋಡಿಕೊಳ್ಳುವುದು.

೭. ಅನುಷ್ಠಾನಕ್ಕೆ ತರಬಲ್ಲ, ಪರಿಣಾಮಕಾರಿ ಕಲಿಕೆಗೆ ಅವಶ್ಯ ವಾಗಿರುವ, ಅದೇ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಹೊರೆಯೂ ಆಗದ ರೀತಿಯಲ್ಲಿ, ಸೂಕ್ತ ನಿಯಮಗಳನ್ನು ಮತ್ತು ವೇಳಾಪಟ್ಟಿಯನ್ನು ಜಾರಿಗೆ ತರುವುದು.

೮. ವಿದ್ಯಾರ್ಥಿಗಳನ್ನು ಅವರ ಪರಿಶ್ರಮಕ್ಕಾಗಿ ಆಗಾಗ್ಗೆ ಪ್ರಶಂಸಿಸು ವುದು. ಇದು ಮಕ್ಕಳಿಗೆ ಉತ್ತೇಜನಕಾರಿಯಾಗಿ ಪರಿಣಮಿಸುತ್ತದೆ.

೯. ವಿದ್ಯಾರ್ಥಿಗಳು, ಪರಸ್ಪರ ಬೆಂಬಲವಾಗಿ ನಿಲ್ಲುವಂತೆಯೂ, ಸಹಾಯ ಮಾಡಿಕೊಳ್ಳುವಂತೆಯೂ ಪ್ರೇರೇಪಿಸುವುದು.

೧೦. ಮಕ್ಕಳ ಕಲಿಕಾ ಪ್ರಗತಿಯ ಬಗ್ಗೆ ವಿವರವಾದ ವರದಿಗಳನ್ನು ತಯಾರಿಸುವುದು.

ಶಿಕ್ಷಕನ ಮೂಲ ಕರ್ತವ್ಯವೇ ಬೋಧನೆ. ಹೀಗಾಗಿ ಅವನ ಬೋಧನೆ ಸಮರ್ಥವಾಗಿದ್ದಷ್ಟೂ ಅವನು ಉತ್ತಮ ಶಿಕ್ಷಕನೆಂದು ಅನ್ನಿಸಿಕೊಳ್ಳುತ್ತಾನೆ.

**ಇನ್ನು ನೀವು 'ಬೋಧಿಸಲು' ಸಿದ್ಧರಾಗಿ!**

★

### ವಾರ್ತಾ ವಿಶ್ಲೇಷಣೆ — ಶಿಕ್ಷಕ–ವಿದ್ಯಾರ್ಥಿ ಸಂಬಂಧ

ಈ ಇಂಟರ್–ನೆಟ್ ಯುಗದಲ್ಲಿ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಂಬಂಧ ಪ್ರಸ್ತುತವೇ? ಖಂಡಿತ ಹೌದು ಎನ್ನುತ್ತಾರೆ ವಿದ್ಯಾರ್ಥಿಗಳು. ('ದಿ ಹಿಂದೂ' ಪತ್ರಿಕೆ, ಆಗಸ್ಟ್ ೨, ೨೦೧೦) ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯಲ್ಲಿ ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವಿನ ಮಧುರ ಬಾಂಧವ್ಯ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಇದರಿಂದ ವಿದ್ಯಾರ್ಥಿಗಳಲ್ಲಿ ಪಠ್ಯವಿಷಯಕ ಜ್ಞಾನ ಗಣನೀಯವಾಗಿ ಹೆಚ್ಚಾಗುವುದರೊಂದಿಗೆ, ಸೂಕ್ತ ಉದ್ಯೋಗಾವಕಾಶಗಳನ್ನು ಹುಡುಕಿಕೊಳ್ಳುವಲ್ಲಿ ಇದರಿಂದ ಮಾರ್ಗದರ್ಶನ ಕೂಡ ಸಿಗುತ್ತದೆ.

ಆದರೆ ಇತ್ತೀಚಿಗೆ ಈ ಬಗೆಯ ಸಂಬಂಧ ಗಣನೀಯವಾಗಿ ಕುಂಠಿತವಾಗುತ್ತಿದೆ ಎಂದು 'ಹಿಂದೂ' ಪತ್ರಿಕೆಯು ಸಂದರ್ಶನ ಮಾಡಿದ ಎಲ್ಲ ವಿದ್ಯಾರ್ಥಿಗಳೂ ಅಭಿಪ್ರಾಯಪಡುತ್ತಾರೆ. ವಿಷಯಗಳ ಮೇಲಿನ ಮಾಹಿತಿ ಸಂಗ್ರಹಕ್ಕೆ ಮಾತ್ರವೇ ಉಪಯೋಗಕ್ಕೆ ಬರುವವರು ಎಂಬಂತೆ ಶಿಕ್ಷಕರ ಬಗ್ಗೆ ವಿದ್ಯಾರ್ಥಿಗಳು ಭಾವಿಸಿಕೊಳ್ಳುತ್ತಾರೆ. ಪಠ್ಯವಿಷಯವನ್ನು ಬೋಧಿಸುವುದಷ್ಟೇ ತಮ್ಮ ಹೊಣೆ ಎಂದು ಶಿಕ್ಷಕರು ಕೂಡ ಅಂದುಕೊಳ್ಳುತ್ತಾರೆ. ಹೀಗಾಗಿ ಅವರಿಬ್ಬರ ನಡುವೆ ಯಾವುದೇ ರೀತಿಯ ವೈಯಕ್ತಿಕ ಮಾತುಕತೆಗೆ ಮತ್ತು ಸ್ನೇಹ ಸೌಹಾರ್ದಗಳಿಗೆ ಅವಕಾಶ ಸಿಕ್ಕುತ್ತಿಲ್ಲ. ಇದು ಇಂದಿನ ಶಿಕ್ಷಣವ್ಯವಸ್ಥೆಯನ್ನು ನಿರ್ಜೀವವಾಗಿಸಿಬಿಟ್ಟಿದೆ ಎಂಬ ಒಟ್ಟಾರೆ ಅನಿಸಿಕೆ ಈ ಸಂದರ್ಶನಗಳಲ್ಲಿ ವ್ಯಕ್ತವಾಗಿದೆ.

'ಜ್ಞಾನ' ಎನ್ನುವ ಅತ್ಯಮೂಲ್ಯ ವಸ್ತುವಿನ ಒಂದು ಬದಿಯಲ್ಲಿ ಶಿಕ್ಷಕರು ಮತ್ತು ಇನ್ನೊಂದು ಬದಿಯಲ್ಲಿ ವಿದ್ಯಾರ್ಥಿಗಳು ಇರುತ್ತಾರೆ. ಶಿಕ್ಷಕರಲ್ಲಿ ಜ್ಞಾನವು ವ್ಯಕ್ತವಾಗಿ ಕಂಡರೆ, ವಿದ್ಯಾರ್ಥಿಗಳಲ್ಲಿ ಅದು ಸುಪ್ತವಾಗಿದೆ. ಹೀಗಾಗಿ 'ಜ್ಞಾನಪ್ರದಾನ' ಎನ್ನುವುದು ಸುಪ್ತವಾಗಿರುವುದನ್ನು, ವ್ಯಕ್ತಗೊಳಿಸುವ ಪವಿತ್ರ ಕಾರ್ಯವಾಗಿದೆ. ಇದಕ್ಕಾಗಿ ಸಾಧಾರಣ ಬಾಂಧವ್ಯವನ್ನು ಮೀರಿದ ಆಧ್ಯಾತ್ಮಿಕ ಸಂಬಂಧ ಅವರಿಬ್ಬರ ನಡುವೆ ಇರುವುದು ಅವಶ್ಯಕ. ಹಾಗೆಂದೇ "ನಮ್ಮಿಬ್ಬರ ನಡುವೆ ಯಾವುದೇ ಭಿನ್ನಾಭಿಪ್ರಾಯಗಳು ಇಲ್ಲದಿರಲಿ" ಎಂದು ಅವರಿಬ್ಬರೂ ಪ್ರಾರ್ಥಿಸಿಕೊಳ್ಳುತ್ತಾರೆ. ಭಾರತೀಯ ಸಂಸ್ಕೃತಿಯು ಶಿಕ್ಷಕ–ವಿದ್ಯಾರ್ಥಿಗಳ ನಡುವಣ ಬಾಂಧವ್ಯದ ಬಗ್ಗೆ ನಮ್ಮ ಮುಂದೆ ಇರಿಸುವ ಶ್ರೇಷ್ಠಮಟ್ಟದ ಪರಿಕಲ್ಪನೆ ಇದು. ಇಂಥ ಉನ್ನತ ಮಟ್ಟದ ಆದರ್ಶವಿದ್ದಾಗ ಮಾತ್ರ, ಶಿಕ್ಷಣವೆಂಬುದು ಜೀವಂತ ಪ್ರಕ್ರಿಯೆಯಾಗುತ್ತದೆ; ಪವಿತ್ರವಾದ ಆಧ್ಯಾತ್ಮಿಕ ಆಯಾಮವನ್ನು ಪಡೆದುಕೊಳ್ಳುತ್ತದೆ. ಅದು ಇಂದಿನ ಯಾಂತ್ರಿಕ ಪರಿಸ್ಥಿತಿಯಲ್ಲಿ ಸಾಧ್ಯವೇ?

★

# ಶಿಕ್ಷಣ ಮತ್ತು ಶಿಕ್ಷಕರು

ಪ್ರೊ. ಕೆ. ಆರ್. ನಾಗರತ್ನ



**ಇಂದಿನ ಕಾಲದಲ್ಲಿ ಶಿಕ್ಷಣವು ಹಲವಾರು ಆಯಾಮಗಳನ್ನು ಪಡೆದುಕೊಳ್ಳುತ್ತಿದೆ. ಆದರೂ, ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕನ ಪಾತ್ರಕ್ಕೆ ಎಂದಿಗೂ ಕುಂದಾಗುವುದಿಲ್ಲ. ಪ್ರಾಚೀನ ಕಾಲದಿಂದ ಶಿಕ್ಷಕನೇ ಶಿಕ್ಷಣ ವ್ಯವಸ್ಥೆಯ ಕೇಂದ್ರಬಿಂದು ಎನಿಸಿದ್ದಾನೆ. ಈ ಹಿನ್ನೆಲೆಯಲ್ಲಿ ಶಿಕ್ಷಣದ ಅಗತ್ಯ ಮತ್ತು ಶಿಕ್ಷಕರ ಮಹತ್ವದ ಬಗ್ಗೆ ತಿಳಿಸಿಕೊಟ್ಟಿರುವ ಲೇಖಕಿ ಮೈಸೂರಿನ ಸೈಂಟ್ ಜೋಸೆಫ್ ಶಿಕ್ಷಣ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾರೆ.**

**ಮ**ಗುವು ತನ್ನ ಸುತ್ತಲಿನ ಪ್ರಪಂಚದ ಆಗುಹೋಗುಗಳ ಬಗ್ಗೆ ತಿಳಿಯಲು ಇಚ್ಛಿಸುತ್ತದೆ. ತನ್ನ ವಯೋಮಾನವನ್ನು ಅನುಸರಿಸಿ ಗುರುವಿನಿಂದ, ಸ್ವಾನುಭವದಿಂದ, ಇಲ್ಲವೆ ಪುಸ್ತಕಗಳ ಓದಿನಿಂದ ಅನೇಕ ಉಪಯುಕ್ತ ಸಂಗತಿಗಳನ್ನು ತಿಳಿದುಕೊಳ್ಳುತ್ತದೆ. ಹೀಗೆ ಕ್ರಮವಾಗಿ ತಿಳಿದುಕೊಳ್ಳುವ ಕಾರ್ಯವೇ 'ವಿದ್ಯಾಭ್ಯಾಸ'. 'ವಿದ್' ಎಂದರೆ 'ತಿಳಿ' ಎಂದರ್ಥ. ವಿದ್ಯಾಭ್ಯಾಸದಿಂದ ವಿದ್ಯಾರ್ಥಿಗೆ ಜ್ಞಾನಾರ್ಜನೆಯಾಗುತ್ತದೆ. ಆ ಜ್ಞಾನಾರ್ಜನೆಗಾಗಿ 'ಶಿಕ್ಷಣ' ಒಂದು ಪ್ರಕ್ರಿಯೆಯಾಗುತ್ತದೆ. ಆ ಶಿಕ್ಷಣದ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಯನ್ನು ತೊಡಗಿಸುವಾತನೇ 'ಶಿಕ್ಷಕ'ನಾಗುತ್ತಾನೆ. ಅವನೇ 'ಉಪಾಧ್ಯಾಯ' ಮತ್ತು 'ಗುರು' ಎಂದೂ ಅನ್ನಿಸಿಕೊಳ್ಳುತ್ತಾನೆ. ಗುರು ಪದದಲ್ಲಿರುವ 'ಗು' ಅಕ್ಷರವು ಅಂಧಕಾರ ಎಂದೂ, 'ರು' ಅಕ್ಷರವು ಅದನ್ನು 'ನಿವಾರಿಸುವವನು' ಎಂದೂ ಅರ್ಥೈಸಲ್ಪಟ್ಟಿದೆ. ಒಟ್ಟಿನಲ್ಲಿ ಹಿಂದಿನ ಕಾಲದಲ್ಲಿ, ವಿದ್ಯಾರ್ಜನೆಗಾಗಿ ಇದ್ದ ಶಿಕ್ಷಣವು ವ್ಯಕ್ತಿಯನ್ನು ಮಾನವ ನನ್ನಾಗಿ ಮಾಡುವ ಮತ್ತು ಮಾನವನನ್ನು ದೇವಮಾನವನನ್ನಾಗಿ ಮಾಡುವ ಒಂದು ಪ್ರಚೋದಕ ಶಕ್ತಿಯಾಗಿತ್ತು ಎನ್ನುವುದು ನಿರ್ವಿವಾದ.

ಪ್ರಾಚೀನ ಕಾಲದಲ್ಲಿ ವಿದ್ಯಾಭ್ಯಾಸ ಎಂದರೆ ಮಾಹಿತಿಯನ್ನು ಉರುಹೊಡೆದು ಸಂಗ್ರಹಿಸಿ ಮಿದುಳಿನ ಉಗ್ರಾಣದಲ್ಲಿ ಭದ್ರವಾಗಿ ಬೀಗ ಹಾಕಿಡುವುದಾಗಿರಲಿಲ್ಲ. ಅದಕ್ಕೆ ಬದಲು ಜೀವನದಲ್ಲಿ ಅವುಗಳನ್ನು ಅನುಷ್ಠಾನ ಮಾಡುವುದಾಗಿತ್ತು. ಅಂದರೆ ವ್ಯಕ್ತಿ ಸಾಮಾಜಿಕವಾಗಿ ಮತ್ತು ವೈಯಕ್ತಿಕವಾಗಿ 'ಜೀವಪರಿವರ್ತನಕಾರಿ'ಯಾದ (life transformer) ಒಂದು ವಿಶಿಷ್ಟ ಪ್ರಕ್ರಿಯೆಗೆ ಒಳಗಾಗುತ್ತಿದ್ದನು. ಅದೇ ನಿಜವಾದ ಶಿಕ್ಷಣವಾಗಿ ಸಾರ್ಥಕತೆಯನ್ನು ತಂದುಕೊಡುತ್ತಿತ್ತು. ಅಂದು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದ ವಿಷಯಗಳಾದ ವೇದಗಳು, ಧ್ವನಿಶಾಸ್ತ್ರ, ಖಗೋಳಶಾಸ್ತ್ರ, ವೈದ್ಯಶಾಸ್ತ್ರ, ವಾಸ್ತುಶಿಲ್ಪಶಾಸ್ತ್ರ, ವ್ಯಾಕರಣ, ಕಾವ್ಯ ಮುಂತಾದವುಗಳನ್ನು 'ಅಪರಾ ವಿದ್ಯಾ' ಅಥವಾ ಲೌಕಿಕ ವಿದ್ಯೆ ಎಂಬ ಹೆಸರಿನಿಂದ ಕರೆಯುತ್ತಿದ್ದರು. ಇದಕ್ಕೆ ವ್ಯತಿರಿಕ್ತವಾಗಿ ಉನ್ನತ ವಿದ್ಯೆಯಾದ 'ಪರಾ ವಿದ್ಯೆ'ಯನ್ನು ಅಂದರೆ ಯಾವ ವಿದ್ಯೆಯಿಂದ ಒಬ್ಬ ವ್ಯಕ್ತಿ ತನ್ನ ಅಮರವಾದ ಆತ್ಮದ ಸಾಕ್ಷಾತ್ಕಾರ ಪಡೆಯಬಹುದಾಗಿತ್ತೋ ಅದನ್ನು ನಿಜವಾದ 'ಶಿಕ್ಷಣ' ಎಂದು ಪರಿಗಣಿಸಿದ್ದರು. ಪ್ರಾಚೀನ ಕಾಲದ ಶಿಕ್ಷಣವು ವೇದಾಂತದ ದರ್ಶನವನ್ನು ಮಾಡಿಸುವುದರ ಜೊತೆಗೆ, ಜನರಲ್ಲಿ ಸಂಸ್ಕೃತಿಯ ಸಾರವನ್ನೂ ಪ್ರಸಾರ ಮಾಡುತ್ತಿತ್ತು. ವಿದ್ಯಾರ್ಜನೆ, ವಿದ್ಯಾವರ್ಧನೆ, ವಿದ್ಯಾದಾನ ಮತ್ತು ವಿದ್ಯೆಯಿಂದ ಕಲಿತುದನ್ನು ಬಾಳಿಗೆ ಹೊಂದಿಸಿಕೊಂಡು ಸಮಾಜದಲ್ಲಿ ವ್ಯವಹರಿಸಿ ಸತ್ಪ್ರಜೆಯಾಗಿ ಬಾಳುವುದು – ಇವು ಅಂದಿನ ಶಿಕ್ಷಣರಚನೆಯ ಅವಿಭಾಜ್ಯ ಅಂಶಗಳಾಗಿದ್ದವು.

## ಇಂದು ಯಾವ ವಿಧದ ಶಿಕ್ಷಣ ನಮಗೆ ಬೇಕು?

ಈ ಆಧುನಿಕ ಪ್ರಪಂಚದಲ್ಲಿ ಯಾವ ವಿಧದ ಶಿಕ್ಷಣ ಬೇಕಾಗಿದೆ ಎಂಬ ಪ್ರಶ್ನೆಗೆ ಸ್ವಾಮಿ ವಿವೇಕಾನಂದರು ಒಂದು ಶತಮಾನದ ಹಿಂದೆಯೇ ಉತ್ತರಿಸಿದ್ದನ್ನು ನಾವು ಸ್ಮರಿಸಬೇಕು: "ಯಾವ ಶಿಕ್ಷಣ ದಿಂದ ನಮ್ಮ ಚಾರಿತ್ರ್ಯ ನಿರ್ಮಾಣವಾಗುತ್ತದೋ, ಮನೋಬಲ ವರ್ಧಿಸುತ್ತದೋ, ಬುದ್ಧಿಬಲ ವಿಸ್ತಾರವಾಗುತ್ತದೋ, ಯಾವುದರಿಂದ ನಮ್ಮ ಕಾಲ ಮೇಲೆ ನಾವು ನಿಂತು ಸ್ವತಂತ್ರರಾಗುತ್ತೇವೋ ಆ ಶಿಕ್ಷಣ ನಮ್ಮ ವಿದ್ಯಾರ್ಥಿಗಳಿಗೆ ಅಗತ್ಯವಾಗಿದೆ."

ಶಿಕ್ಷಣವೆಂದರೆ ಇಡೀ ಜೀವಮಾನದಲ್ಲಿ ಜೀರ್ಣಿಸಿಕೊಳ್ಳದ, ಅರ್ಥೈಸಿಕೊಳ್ಳದ, ಮಿದುಳಿಗೆ ರವಾನಿಸಲ್ಪಟ್ಟ ಮಾಹಿತಿಯ ರಾಶಿಯೇ? ಜೀವ ನೀಡುವ, ಬದುಕು ನಿರ್ಮಿಸುವ, ಚಾರಿತ್ರ್ಯ ರೂಪಿಸುವ ವಿಚಾರಗಳ ಸ್ವೀಕಾರ ಮತ್ತು ಅನುಷ್ಠಾನವೂ ಬೇಕಲ್ಲವೆ? ವಿದೇಶಿ ಭಾಷೆಯಲ್ಲಿ ವಿಚಾರಗಳನ್ನು ಉರು ಹೊಡೆದು, ಮಿದುಳಿಗೆ ತುಂಬಿಕೊಂಡು, ಪರೀಕ್ಷೆಯಲ್ಲಿ ಬಟ್ಟಿ ಇಳಿಸಿ ವಿಶ್ವವಿದ್ಯಾನಿಲಯದ ಪದವಿ ಗಳಿಸಿದ ಮಾತ್ರಕ್ಕೆ ಶಿಕ್ಷಣ ಪಡೆದಂತಾಗುವುದೇ? ವ್ಯಕ್ತಿಯನ್ನು